ದೀಪಾವಳಿ ಮರುದಿನದ ಮಹಾನಗರದ ಮುಂಜಾವು!

ಕನ್ನಡವಷ್ಟೇ ಅಲ್ಲ, ಭಾರತದ, ಅಷ್ಟೇ ಏಕೆ ಜಗತ್ತಿನ ಬಹುತೇಕ ಚಿತ್ರರಂಗಗಳ ಪ್ರಸ್ತುತ ಪರಿಸ್ಥಿತಿಯನ್ನು ಈ ಒಂದು ವಾಕ್ಯದಲ್ಲಿ ಸೂಚಿಸಬಹುದು. ಹಾಗಾಗಿ ಕನ್ನಡ ಚಿತ್ರರಂಗದ 2020ನೇ ವರ್ಷದ ಅವಲೋಕನಕ್ಕಿಳಿದರೆ ಅದು ಜಗತ್ತಿನ ಚಿತ್ರರಂಗಗಳ, ಪರೋಕ್ಷವಾಗಿ ಜಗಜೀವನದ ಗತಿಸ್ಥಿತಿ ಬಿಂಬಗಳನ್ನೂ ಪ್ರತಿಫಲಿಸುತ್ತದೆ.

ಅಂದಹಾಗೆ, ದೀಪಾವಳಿ ಮರುದಿನದ ಮುಂಜಾವಿಗೂ ಚಿತ್ರರಂಗಕ್ಕೂ ಎತ್ತಣಿಂದೆತ್ತಣ ಹೋಲಿಕೆ? ಎಲ್ಲಿಯ ಸಾಮ್ಯತೆ? ಈ ಹೋಲಿಕೆಯ ಔಚಿತ್ಯ ಅರ್ಥವಾಗಬೇಕಾದರೆ ಈ ವರ್ಷದ್ದಲ್ಲ, ಕಳೆದ ವರ್ಷದ ದೀಪಾವಳಿಯನ್ನೊಮ್ಮೆ ನೆನಪಿಸಿಕೊಳ್ಳಬೇಕು. ನೀವು ದೇಶದ ಯಾವುದಾದರೂ ಮಹಾನಗರದಲ್ಲಿ ವಾಸವಿದ್ದರೆ (ಇಲ್ಲದಿದ್ದರೂ ಟೀವಿ ಮೂಲಕ ನೋಡಿಯೇ ಇರುತ್ತೀರಿ ಬಿಡಿ) ಈ ಸಾಮ್ಯತೆ ಇನ್ನಷ್ಟು ಸ್ಪಷ್ಟವಾದೀತು.

ಹಬ್ಬದ ಮರುದಿನ ಮುಂಜಾನೆ ವಾಯುವಿಹಾರಕ್ಕೆಂದು ಹೊರಗಡಿಯಿಟ್ಟವರ ಮೂಗಿಗೆ ಪಟಾಕಿಯ ಕಮಟು ರಪ್ ಎಂದು ರಾಚುತ್ತದೆ. ಅಡಿಯಿಟ್ಟರೆ ಚಿಂದಿಯಾಗಿ ಬಿದ್ದ ಪಟಾಕಿಯ ವಿವಿಧ ಬಣ್ಣಗಳ ಕಾಗದಗಳು, ಸುಟ್ಟು ವಿಕಾರಗೊಂಡ ಭೂಚಕ್ರದ ಅವಶೇಷಗಳು, ಎಲ್ಲಿಂದಲೋ ಆಕಾಶಕ್ಕೆ ನೆಗೆದು ಚಿತ್ತಾರ ಸಿಡಿಸಿ ಮರಳಿ ಭೂಮಿಯ ಮೇಲೆ ನಿಶ್ಚೇಷ್ಟಿತವಾಗಿ ಬಿದ್ದ ರಾಕೆಟ್ಟುಗಳ ಛಿದ್ರ ಅಂಗಾಂಗಗಳು, ನಕ್ಷತ್ರಕಡ್ಡಿಯ ತಂತಿ, ರಸ್ತೆಯ ಸುಟ್ಟ ಗಾಯದ ಹಾಗೆ ಬೆಳ್ಳಗಾದ ಗುರುತುಗಳು, ವಾರ್ತಾ ವಾಹಿನಿಗಳಲ್ಲಿ ನಿದ್ದೆ ಪಟಾಕಿ ಸಿಡಿಸಿಕೊಂಡು ಮುಖ, ಮೈ ಕೈ ಸುಟ್ಟುಕೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ, ಸಾವನ್ನಪ್ಪಿರುವ, ಕಣ್ಣು ಕಳೆದುಕೊಂಡಿರುವ ವಿಕಾರಗೊಂಡ ಆಕೃತಿಗಳು... ಅಬ್ಬಾ! ಹಬ್ಬದ ಪರಿಣಾಮವೇ ಇದೆಲ್ಲ? ಇದಕ್ಕಾಗಿಯೇ ನಾವು ಹಬ್ಬವನ್ನಾಚರಿಸುವುದು? ಈ ಪ್ರಶ್ನೆಗಳು ನಮ್ಮೊಳಗೆ ವಿಷಾದದ ಅಲೆಯನ್ನೆಬ್ಬಿಸುತ್ತವೆ. ಕಸಗುಡಿಸುತ್ತ ಎಲ್ಲವನ್ನು ಮೊಗೆಮೊಗೆದು ರಾಶಿ ಹಾಕುವ ಸಫಾಯಿ ಕರ್ಮಚಾರಿಗಳು, ನಮ್ಮ ದಾಳಿಗೆ ತುತ್ತಾದ ನಿತ್ರಾಣಗೊಂಡ ಜಗಕ್ಕೆ ಪ್ರಥಮ ಚಿಕಿತ್ಸೆ ಕೊಡುತ್ತಿರುವ ಜೀವರಕ್ಷಕ ವೈದ್ಯರ ಹಾಗೆ ಕಾಣಿಸುತ್ತಾರೆ. ಅದೇ ಸಮಯದಲ್ಲಿ ನಿನ್ನೆಯ ಹಬ್ಬದ ನೆನಪಿನಲ್ಲಿಯೇ ಈವತ್ತೂ ಅಷ್ಟಿಷ್ಟು ಪಟಾಕಿ ಹೊಡೆಯುವ ಉಮೇದಿನಲ್ಲಿ ಓಡಾಡುವ ಹುಡುಗರೂ ಕಾಣಿಸುತ್ತಾರೆ. ಹಬ್ಬದ ಉದ್ದೇಶ, ಸಾರ್ಥಕ್ಯದ ಬಗ್ಗೆ ಅಲವರಿಕೆ ಹುಟ್ಟಿಸುವ ಗಳಿಗೆ ಅದು.

ದೊಡ್ಡಹಬ್ಬ ಎಂದು ಕರೆಸಿಕೊಳ್ಳುವ ದೀಪಾವಳಿ ಈ ವರ್ಷವೂ ಹೆಚ್ಚೂಕಮ್ಮಿ ಹೀಗೆಯೇ ಮುಗಿದುಹೋಗಿದೆ. ಹಬ್ಬದ ವಿಷಯ ಬಿಡಿ, ಚಿತ್ರರಂಗದ ಈ ವರ್ಷದ ಆರಂಭದ ಮೂರು ತಿಂಗಳ ಮೇಲೆ ಕಣ್ಣು ನೆಡಿ.

## ವರ್ಷಾರಂಭದ ಸಂಭ್ರಮ

2020ರ ಮೊದಲ ವಾರ, ಅಂದರೆ ಜನವರಿ 3ರಂದು ಬಿಡುಗಡೆಯಾದ ಸಿನಿಮಾಗಳು ಎರಡೇ ಎರಡು! ಅವೂ ನಿರೀಕ್ಷೆ ಹುಟ್ಟಿಸಿದ್ದ ಸಿನಿಮಾಗಳೇನಲ್ಲ. ಎರಡನೇ ವಾರದಲ್ಲಿ ಮೂರು ಸಿನಿಮಾಗಳು ಬಿಡುಗಡೆಯಾದವು. ನಾಲ್ಕನೇ ವಾರದಲ್ಲಿ ಆರು ಸಿನಿಮಾಗಳು! ಈ ಪಟ್ಟಿ ದ್ವಿಗುಣಗೊಳ್ಳುತ್ತಲೇ ಹೋಯಿತು. 2020ರ ಜನವರಿಯಿಂದ ಮಾರ್ಚ್‌ವರೆಗೆ ಸುಮಾರು 60 ಸಿನಿಮಾಗಳು ಬಿಡುಗಡೆಯಾಗಿವೆ. ಮೂರು ತಿಂಗಳಲ್ಲಿ ಅರವತ್ತು ಸಿನಿಮಾಗಳೆಂದರೆ ಸರಾಸರಿ ತಿಂಗಳಿಗೆ ಇಪ್ಪತ್ತು ಸಿನಿಮಾಗಳು. ಅಂದರೆ ಒಂದೂವರೆ ದಿನಕ್ಕೊಂದು ಸಿನಿಮಾಗಳ ಲೆಕ್ಕ. ನಾಲ್ಕು ವರ್ಷಕ್ಕೊಮ್ಮೆ ಬರುವ ಅಧಿಕ ತಿಂಗಳಿನ ಒಂದು ದಿನವನ್ನೂ ಹೊತ್ತು ತಂದಿದ್ದ ಫೆಬ್ರುವರಿಯಲ್ಲಿ ಬಿಡುಗಡೆಯಾದ ಸಿನಿಮಾಗಳು 30! ದಿನಕ್ಕೊಂದು ಸಿನಿಮಾ ನೋಡಿದರೂ ಒಂದು ಸಿನಿಮಾ ಬಾಕಿ ಉಳಿಯುತ್ತದೆ!

ಇದು ಹಬ್ಬದ ದಿನದ ಪಟಾಕಿ ಸಂಭ್ರಮವಲ್ಲದೆ ಇನ್ನೇನು?

ಈ ಪಟಾಕಿ ಸಂಭ್ರಮ ಫೆಬ್ರುವರಿಯ ರಾತ್ರಿ ಕಳೆದು ಮಾರ್ಚ್‌ನ ಮೊದಲ ಶುಕ್ರವಾರದ ಬೆಳಗಿನವರೆಗೂ ಮುಂದುವರಿದೇ ಇತ್ತು. ಆದರೆ ಎರಡನೇ ವಾರದ ವೇಳೆಗೆ ಈ ಖುಷಿ ಕುಸಿದಿತ್ತು. ಮಾರ್ಚ್ ಎರಡನೇ ವಾರ ಬಿಡುಗಡೆಯಾಗಿದ್ದು ಮೂರೇ ಸಿನಿಮಾ. ಮೂರನೇ ವಾರಕ್ಕೆ ಅದು ಇನ್ನೂ ಬಡವಾಗಿತ್ತು. ನಾಲ್ಕನೇ ಶುಕ್ರವಾರದ ಹೊತ್ತಿಗೆ, ಖುಷಿಯ ಶೇಷವನ್ನೂ ಕೊರೊನಾ ಸಂಪೂರ್ಣವಾಗಿ ಕಸಿದುಕೊಂಡಿತು.

ಮುಂದಿನದೆಲ್ಲ ಗೊತ್ತಿರುವುದೇ. ಜನರ ಶಿಳ್ಳೆ, ಚಪ್ಪಾಳೆ, ಜೈಕಾರಗಳಲ್ಲಿ ತುಂಬಿರುತ್ತಿದ್ದ ಚಿತ್ರಮಂದಿರಗಳು ಇದ್ದಕ್ಕಿದ್ದಂತೆಯೇ ನಿರ್ಜನಗೊಂಡು, ಸೂತಕದ ಕತ್ತಲನ್ನು ಒಡಲೊಳಗೆ ಹೊತ್ತ ಗೋರಿಗಳ ಹಾಗಾದವು. ಚಿತ್ರಮಂದಿರಗಳ ಎದುರಿನ ಕಟೌಟುಗಳಲ್ಲಿ ಹಾರಗಳು ಒಣಗಿದವು. ಗೇಟುಗಳಿಗೆ ಬೀಗ ಬಿತ್ತು. ಚಿತ್ರಮಂದಿರದ ಜಳಪಳ ಹೊಳೆಯುವ ಬೋರ್ಡುಗಳು ದೂಳಿಗೆ ಮಸುಕಾದವು. ಶುಕ್ರವಾರ ಬಂತೆಂದರೆ ಸಾಕು, ಗುಂಪುಗೂಡಿ, ದಿಗ್ಗನೆದ್ದು ಬಂದ ಇರುವೆಗಳ ಹಾಗೆ ಚಿತ್ರಮಂದಿರ ಮುತ್ತುತ್ತಿದ್ದ ಪ್ರೇಕ್ಷಕಗಣಗಳೆಲ್ಲ ಮುಖಕ್ಕೆ ಗವಸು ಸುತ್ತಿ ಪರಸ್ಪರ ಅಪರಿಚಿತರಾದರು. ಒಟ್ಟಿಗೆ ಕೂತು ಕುಣಿಯುವ ಸಂಭ್ರಮ ಒತ್ತಟ್ಟಿಗಿರಲಿ, ಮುಖಾಮುಖಿಯಾಗುವುದೂ ಸಾಧ್ಯವಿಲ್ಲದ ಹಾಗೆ ನಿರ್ಜನರೋಗ ಜಗವನ್ನೇ ಹೈರಾಣು ಮಾಡಿತು.

## ಮೊದಲರ್ಧವೆಲ್ಲ ಜೊಳ್ಳೇನಲ್ಲ

ವರ್ಷದ ಮೊದಲರ್ಧ ಗಮನಸೆಳೆಯುವುದು ಬರೀ ಸಂಖ್ಯೆಯ ಕಾರಣಕ್ಕಾಗಿಯಷ್ಟೇ ಅಲ್ಲ; ಹಲವು ಜೊಳ್ಳುಕಾಳುಗಳ ನಡುವೆ ಕೆಲವು ನಿರೀಕ್ಷೆಯ ಚಿಗುರೂ ತಾಜಾತನದ ತಳಿರೂ ಕಾಣಿಸಿಕೊಂಡಿದ್ದನ್ನು ಮರೆಯುವಂತಿಲ್ಲ.

ಜನವರಿ ಮೂರನೇ ಶುಕ್ರವಾರ ಚಿತ್ರಮಂದಿರಕ್ಕೆ ಲಗ್ಗೆಯಿಟ್ಟ, ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಇಂಡಿಯಾ vs ಇಂಗ್ಲೆಂಡ್' ಸಿನಿಮಾ ತುಸು ನಿರೀಕ್ಷೆ ಹುಟ್ಟಿಸಿತ್ತು. ಆದರೆ ಚಿತ್ರಮಂದಿರಗಳಲ್ಲಿ ಪ್ರೇಕ್ಷಕನ ನಿರೀಕ್ಷೆಯ ಮಟ್ಟ ತಲುಪದ್ದಕ್ಕೋ ಏನೋ, ಗಲ್ಲಾಪೆಟ್ಟಿಗೆಯಲ್ಲಿ ಸೌಂಡು ಮಾಡಲೇ ಇಲ್ಲ. ಹಾಗೆ ನೋಡಿದರೆ ಜನವರಿ ತಿಂಗಳ ಕೊನೆಯ ವಾರ ಬಿಡುಗಡೆಯಾದ ಸಿನಿಮಾಗಳೇ ಒಂದಿಷ್ಟು ಸದ್ದು ಮಾಡಿದ್ದು. ರಾಜ್ ಪತ್ತಿಪಾಟಿ ನಿರ್ದೇಶನದ, ವಿಕಾಸ್ ಮತ್ತು ಸಿಂಧು ಲೋಕನಾಥ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದ 'ಕಾಣದಂತೆ ಮಾಯವಾದನೋ' ಎನ್ನುವ ಒಳ್ಳೆಯ ದೆವ್ವದ ಸಿನಿಮಾ ನೋಡಿದವರಲ್ಲಿ ಬಹುತೇಕರು ಮೆಚ್ಚಿಕೊಂಡರು. ಆದರೆ ನೋಡಿದವರ ಸಂಖ್ಯೆಯೇ ಕಡಿಮೆಯಾಗಿ



'ಯುವರತ್ನ' 2021ರಲ್ಲಿ ತೆರೆಕಾಣಲು ಸಜ್ಜಾಗಿರುವ ಬಹುನಿರೀಕ್ಷಿತ ಚಿತ್ರ. ಪುನೀತ್ ರಾಜ್‌ಕುಮಾರ್ ನಾಯಕನಾಗಿ ನಟಿಸಿರುವ ಈ ಚಿತ್ರ ತೆಲುಗಿನಲ್ಲಿಯೂ ತೆರೆಕಾಣಲಿದೆ

ಸ್ಯಾಂಡಲ್‌ವುಡ್ 20-21